exploited class in the society. I am requesting the Government to give us some developmental schemes rather than welfare schemes. ಇದನ್ನು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದರೆ ಒಳ್ಳೆಯದೆಂದು ನನಗೆ ಅನ್ನಿಸಿಕೆ. ಈ ವಿಷಯದ ಬಗ್ಗೆ ಒಂದು ಚಿಕ್ಕ ವಿನಂತಿ ಮಾಡುತ್ತೇನೆ. ಮಹಿಳಾ ಮಂಡಲಗಳನ್ನು ಸ್ಥಾಪನೆ ಮಾಡಬೇಕೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಮಗೆಲ್ಲಾ ಬಂದಿತ್ತು. ಆದರೆ ಹಾಗೆ ಮಹಿಳಾಮಂಡಲ ಸ್ಥಾಪನೆ ಮಾಡಬೇಕೆಂದು ಹೋದಾಗ ರಿಜಿಸ್ಟ್ರೇಷನ್ ಫೀ 100 ಇದ್ದರೆ ಸಾವಿರ ರೂ ಬೈಬ್ ಕೊಡದೇ ಇದ್ದರೆ ಅವರು ರಿಜಿಸ್ಟ್ರೇಷನ್ ಮಾಡಿಕೊಡುತ್ತಿಲ್ಲ. ಇಂತಹ ವ್ಯವಸ್ಥೆ ಇದೆ. ಹಳ್ಳಿಗಾಡಿನಹೆಣ್ಣುಮಕ್ಕಳು ಸಾವಿರ ಲಂಚ್ ಕೊಟ್ಟು ರಿಜಿಸ್ಟರ್ ಮಾಡಿಸಿಕೊಳ್ಳುವಂತಹ ಶಕ್ತಿ ಹೊಂದಿಲ್ಲ, ಇದನ್ನು ತಾವು ದಯವಿಟ್ಟು ಸೀರಿಯಸ್ಸಾಗಿ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಮಹಿಳಾಮಂಡಲಗಳ ರಿನ್ಯೂವಲ್ಸ್ ಚಾರ್ಜ್ ಇಷ್ಟು ದಿವಸ 2ರೂ ಇತ್ತು, ಒಂದು ವರ್ಷದ ಹಿಂದೆ 100 ರೂ ಮಾಡಿದ್ದಾರೆ, ಹಿಂದೆ ರಿನ್ಯೂವಲ್ಸ್‌ನ್ನು ಕಡ್ಡಾಯವಾಗಿ ಮಾಡಬೇಕೆಂದಿರಲಿಲ್ಲ. ಹಾಗಾಗಿ ತುಂಬಾ ಮಹಿಳಾಮಂಡಲಗಳು 10-15 ವರ್ಷಗಳಿಂದ ರಿನ್ಯೂವಲ್ ಮಾಡಿರಲಿಲ್ಲ. ಈಗ ಕಡ್ಡಾಯ ಬಂದಾಗ ನಾವು ಮಾಡಬೇಕೆಂದು ಹೋದಾಗ ಒಬ್ಬೊಬ್ಬರು 1000, 1500 ರೂಗಳನ್ನು ಕಟ್ಟಬೇಕಾಗಿ ಬಂದಿದೆ. ಹಾಗಾಗಿ ದಯವಿಟ್ಟು ತಾವು ರಿನ್ಯೂವಲ್ ಫೀಜನ್ನು 10, ಅಥವಾ 15 ರೂ ಗೆ ಇಳಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತಾ, ಈ ಕಷ್ಟಕಾಲದಲ್ಲಿ ನಾವು ಅಧಿಕಾರಕ್ಕೆ ಬಂದರೂ ಒಳ್ಳೆಯ ಹಂತದಲ್ಲಿ ನಾವು ಹೋಗುತ್ತಿದ್ದೇವೆ, ಅದಕ್ಕೆ ಸ್ವಾಗತಿಸಿ ಈ ಅವಕಾಶ ಮಾಡಿಕೊಟ್ಟದ್ದಕ್ಕೆ ತಮಗೆ ವಂದಿಸಿ ನಾನು ಮುಕ್ತಾಯ ಮಾಡುವ ಮೊದಲು ಒಂದು ಸಣ್ಣ ವಿಷಯ, ಬರೆದು ಕೊಂಡಿದ್ದೆ ಆದರೆ ಮರೆತುಬಿಟ್ಟಿದ್ದೇನೆ, Actually women are suffering with drunkard husbands ತಮಗೆ ಗೊತ್ತಿದೆ. complete Prohibition Act ನಮ್ಮ ಸರ್ಕಾರದವರು ತಂದರೆ ಒಳ್ಳೆಯದೆಂದು ನಾನು ಭಾವಿಸುತ್ತಿದ್ದೇನೆ.

ಖಾಸಗಿ ನಿರ್ಣಯದ ಮೇಲೆ ಚರ್ಚೆ

ಅಧ್ಯಕ್ಷರು : ಈಗ ಖಾಸಗಿ ನಿರ್ಣಯದ ಮೇಲಿನ ಚರ್ಚೆ. ಶ್ರೀ ವಾಟಾಳ್‌ನಾಗರಾಜ್‌ರವರು ದಿನಾಂಕ 31-3-95ರಂದು ಮಂಡಿಸಿದ ಕೆಳಕಂಡ ನಿರ್ಣಯದ ಮೇಲಿನ ಚರ್ಚೆ ಮುಂದುವರಿಸುವುದು. ಈ ರಾಜ್ಯದಲ್ಲಿ ಸಂಪೂರ್ಣ ಪಾನನಿರೋಧ ಜಾರಿಗೆ ತರಬೇಕೆಂದು ಈ ಸಭೆ ಒತ್ತಾಯಿಸುವುದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಅಧ್ಯಕ್ಷರೇ, ಸ್ಫೂರ್ತೀನೇ ಬರುತ್ತಿಲ್ಲ, ಇಷ್ಟು ತಡವಾಗಿ ಬರಬೇಕಾದರೆ ಯಾರದೋ ಪಿತೂರಿ ಇರಬೇಕೆನಿಸುತ್ತದೆ. ಏಕೆಂದರೆ ಇದು ಬಹಳ ಮುಖ್ಯವಾದದ್ದು ಇಲ್ಲಿ ಬಹುತೇಕ ಜನ ಈ ನಿರ್ಣಯದ ಪರ ಇಲ್ಲ. ಏನೋ ಬಹುಮತ ಬರುವ ಸೂಚನೆ ಇದೆ.

ಅಧ್ಯಕ್ಷರು : ಇವರೆಲ್ಲಾ ಸೇರಿ ಈ ನಿರ್ಣಯಕ್ಕೆ ಇಲ್ಲಿ ಬಹುಮತ ಕೊಟ್ಟರೆ ಅದನ್ನು ತೆಗೆದುಕೊಂಡು ನೀವು ಗವರ್ನರ್ ಹತ್ತಿರ ಹೋದರೆ ;

ಶ್ರೀ ವಾಟಾಳ್ ನಾಗರಾಜ್ : ಈಗ 7.30 ಗಂಟೆ ಆಯಿತು. ಮಾನ್ಯ ಪಟೇಲರೇ, ನಮಗೆ ಸ್ಪಿರಿಟ್ ಬರುತ್ತಿಲ್ಲ. ನೀವು ಕುಳಿತಿರುವುದರಿಂದ ನಮಗೆ ಸ್ವಲ್ಪ ಧೈರ್ಯ ಬಂದಿದೆ.

ಶ್ರೀ ಜೆ.ಹೆಚ್.ಪಟೇಲ್(ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಇದು ಚರ್ಚೆಗೆ ಬಹಳ ಮುಖಗಳಿದ್ದಾವೆ. So many dimensions. ಅರ್ಧ ಗಂಟೆ ಎಂದು ಇದಕ್ಕೆ ನಿಗಧಿ ಮಾಡುವುದು ಎಂದರೆ ಸಾಧ್ಯವಾಗುವುದಿಲ್ಲ. ಇನ್ನೊಂದು ದಿನ ಇದೆ. ಆವತ್ತು ಮಧ್ಯಾಹ್ನದಿಂದಲೇ ಪ್ರಾರಂಭ ಮಾಡಿ ಬಗೆಹರಿಸುವುದು ಒಳ್ಳೆಯದು. ಪಾನ ನಿಷೇಧವನ್ನು ಮಾಡಬಾರದು ಎಂದು ಸರ್ಕಾರ ಎಲ್ಲೂ ಹೇಳಿಲ್ಲ ಆದರೆ ಪಾನ ನಿಷೇಧದ ಪರಿಣಾಮಗಳು, ಆರ್ಥಿಕ ಸಾಮಾಜಿಕ ಮತ್ತು ಇವತ್ತು ಹಳ್ಳಿಗಾಡಿನ ಮೇಲೆ ಆಗುವ ದುಷ್ಪರಿಣಾಮವನ್ನು ಕಂಡು ನಮ್ಮ ವಾಟಾಳ್ ನಾಗರಾಜ್‌ರವರ ಅಭಿಪ್ರಾಯಕ್ಕೆ ಬಹುತೇಕ ಮನ್ನಣೆ ಇದೆ. ನಮ್ಮಲ್ಲಿ ಆಗಲೀ, ಈ ಕಡೆಯಲ್ಲಿಯೇ ಆಗಲೀ ಎಲ್ಲಾ ಕಡೆ ಮನ್ನಣೆ ಇದೆ. ಗುಜರಾತ್‌ನಲ್ಲಿ ಪಾನನಿಷೇಧವನ್ನು ಜಾರಿಗೆ ತಂದಿದೆ. ಆದರೆ ಅಲ್ಲಿಯೂ ಕೂಡ ಸಕ್ಸಸ್‌ಫುಲ್ ಆಗಿಲ್ಲ. ಪಕ್ಷದ ಆಂದ್ರದಲ್ಲಿ ಪಾನನಿಷೇಧವನ್ನು ತೆಗೆದುಕೊಂಡು ಬಂದರು. ಆ ಐಡಿಯವನ್ನು ಒಪ್ಪುತ್ತೇನೆ. ಇದನ್ನು ಹೇಗೆ ಮಾಡಬೇಕು, ಎಷ್ಟು ಮಾಡಬೇಕು ಎನ್ನುವುದರ ಬಗ್ಗೆ ಮೊದಲು ಚರ್ಚೆ ಮಾಡೋಣ. ಎಷ್ಟೆಷ್ಟು ಮಟ್ಟಿಗೆ ಅದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಪಾನ ನಿಷೇಧದ ಬಗ್ಗೆ ಸಮಗ್ರ ಚರ್ಚೆ ಆಗಬೇಕು. ಇದು ರಾಷ್ಟ್ರೀಯ ಚರ್ಚೆ ಆಗಬೇಕು. ಮತ್ತು ಇವರಿಂದ ಬರುವ ಉತ್ಪನ್ನು ಏನು ಇದೆ, ಇದರಿಂದ ಬರುವ ಆದಾಯದಿಂದ ಸರ್ಕಾರ ರಚನೆ ಮಾಡುತ್ತೇವೆ ಎನ್ನುವ ಉದ್ದೇಶ ಏನು ಇದೆಯಲ್ಲಾ ಅದು ನಿಜವಾಗಿಯೂ ಹೋಗಬೇಕು. ಇದರಿಂದ ಬರುವ ಹಣದಿಂದ ನಮ್ಮ ಸರ್ಕಾರದ ಅಭಿವೃದ್ಧಿ ಕಾರ್ಯಗಳು ಆಗುತ್ತಿದೆ. ಅದಕ್ಕೋಸ್ಕರ ನಾವು ಅದನ್ನು ಜಾರಿಗೆ ತರಬಾರದು ಎನ್ನುವ ನೀತಿ ಇದೆಯಲ್ಲಾ, ಅದು ಇರಬಾರದು ಎಂಬುದು ನನ್ನ ಒತ್ತಾಯ. ನೀವು ಹೇಳುವುದು ನನಗೆ ಅರ್ಥವಾಗುತ್ತದೆ. ನಿಜ. ಇದರಲ್ಲಿ ಬರತಕ್ಕ ಈ ಉತ್ಪನ್ನದಿಂದಲೇ ಸರ್ಕಾರವನ್ನು ನಡೆಸುತ್ತೇವೆ ಎಂದರೆ ಏನು ಅರ್ಥ? ಈ ಉತ್ಪನ್ನಕ್ಕೋಸ್ಕರವಾಗಿಯೇ ಅದು ಇರಬೇಕೇ?

ಶ್ರೀ ಜೆ.ಹೆಚ್.ಪಟೇಲ್ : ಆ ಉತ್ಪನ್ನಕ್ಕೋಸ್ಕರ ಪಾನನಿಷೇಧವನ್ನು ವಿರೋಧ ಮಾಡುತ್ತೇವೆ ಎಂದು ಅಲ್ಲ. ಈ ಉತ್ಪನ್ನಗಳನ್ನು ನಾವು ಬೇರೆ ಮಾರ್ಗಗಳಿಂದಲೂ ಮಾಡಿಕೊಳ್ಳಬಹುದು. ಪಾನನಿಷೇದವನ್ನು ಜಾರಿಗೊಳಿಸಲಾರದಂಥ ಒಂದು ನೀತಿ ಯಾಗಬಾರದು. ಪ್ರಪಂಚದ ಯಾವ ದೇಶದಲ್ಲಿಯೂ ಇದು ಯಶಸ್ವಿಯಾಗಲಿಲ್ಲ. ಎಲ್ಲಾ ರಾಷ್ಟ್ರಗಳಲ್ಲೂ ಮಾಡಿದೆವು. ಚೈನಾದಂಥ ರಾಷ್ಟ್ರದಲ್ಲಿ ಕೊಡ ಇದು ಯಶಸ್ವಿಯಾಗಲಿಲ್ಲ. ಆದರೆ ನಾವು ಇದರಿಂದ ಉತ್ಪನ್ನ ಬರುತ್ತದೆ ಎಂದು ಮಾತ್ರ ನಿಷೇಧ ಮಾಡಿಲ್ಲ. ಹಲವಾರು ಬೇರೆ ಸಾಮಾಜಿಕ ಹಾಗೂ ಶೈಕ್ಷಣಿಕ ಕಾರಣಗಳೂ ಇದ್ದಾವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಿಷೇಧ ಮಾಡಬೇಕು ಎನ್ನುವ ಪ್ರಶ್ನೆ, ನಾವು ಅದನ್ನು ಒಂದೊಂದು ಸಾಮಾಜಿಕ ಚೌಕಟ್ಟಿನಲ್ಲಿ ಅದನ್ನು ಆಲೋಚನೆ ಮಾಡಬೇಕಾಗುತ್ತದೆ. ಎಲ್ಲದಕ್ಕೂ ಒಂದೇ ರೀತಿಯಾದಂಥ ಪ್ಯಾರಾಮಿಟರ್ ಹಾಕಿ ನೋಡುವುದು ಸರಿಯಲ್ಲ. ಎರಡನೆಯದು ಈ ಪಾನನಿಷೇಧವನ್ನು ಮಾಡುವುದು ನಮ್ಮ ರಾಜ್ಯದ ಮಟ್ಟಿಗೆ, ನಮ್ಮ ದೇಶದ ಮಟ್ಟಿಗೆ ಅದರಿಂದ ಸಮಾಜದ ಮೇಲೆ ಆಗುವ ಪರಿಣಾಮಗಳೇನು ಎಂದು ನೋಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಯಾವ ದೇಶದಲ್ಲಿ ಪಾನನಿಷೇದವನ್ನು ಜಾರಿಗೆ ತಂದಿಲ್ಲ ಎಂದು ನಿಜ. ಆದರೆ ನಾವು ನೋಡಬೇಕಾದ್ದು ಏನೆಂದರೆ ಬೇರೆ ಎಲ್ಲಾ ದೇಶಗಳ ಪರಿಸ್ಥಿತಿಗೂ ಮತ್ತು ನಮ್ಮ ದೇಶದ ಪರಿಸ್ಥಿತಿಗೂ ಬಹಳ ವ್ಯತ್ಯಾಸ ಇದೆ. ನಮ್ಮ ದೇಶದಲ್ಲಿ ಮಧ್ಯಪಾನದಿಂದ ಸಾಮಾಜಿಕ ವ್ಯವಸ್ಥೆಯ ಮೇಲೆ ಆಗುವ ಪರಿಣಾಮಗಳೇನು ಎನ್ನುವುದನ್ನು ನಾವು ಅಭ್ಯಾಸ ಮಾಡಬೇಕು. ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದಂತೆ ಸಾಮಾಜಿಕ ಸಮಸ್ಯೆಗಳು ಇವೆ. ಆದರೆ ಸಾಮಾಜಿಕ ಸಮಸ್ಯೆಗಳು ನಿಷೇಧದಿಂದ ಉದ್ಭವವಾಗುವ ಸಾಮಾಜಿಕ ಸಮಸ್ಯೆಗಳೇನು? ನಿಷೇದವಿಲ್ಲದೆ ಇರುವ ಉದ್ಭವವಾಗುವ ಸಾಮಾಜಿಕ ಸಮಸ್ಯೆಗಳೇನು? ಇವುಗಳನ್ನೆಲ್ಲಾ ನೋಡಬೇಕಾಗುತ್ತದೆ.

ಅಧ್ಯಕ್ಷರು : ಉಪಮುಖ್ಯಮಂತ್ರಿಗಳ ಮಾತಿನ ಅರ್ಥ ಶಾಸನಬದ್ಧವಾಗಿ ನಾವು ಅಧಕಾರಿದೋರಣೆಯಿಂದ ನಿಷೇಧ ಮಾಡುವ ಪರಿಣಾಮ, ಸಮಾಜವನ್ನು ಸುಧಾರಿಸಿ ಮನಒಲಿಕೆಯಿಂದ ಮಾಡತಕ್ಕ ಪರಿಣಾಮ, ಅದಕ್ಕೆ ಮಾನಸಿಕ ಸಿದ್ಧತೆ ಇಲ್ಲಿ ನಡದಿದೆಯೇ ಎನ್ನುವ ವಿಚಾರ, ಅದು ಅವರ ಅಭಿಪ್ರಾಯ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಾಮಾಜಿಕ ಹಾಗೂ ಶೈಕ್ಷಣಿಕ ಸಮಸ್ಯೆಗಳನ್ನೆಲ್ಲಾ ಅವರು ಹೇಳಿದರು. ಸಾಮಾಜಿಕ ಸಮಸ್ಯೆಗಳು ಹೇಗೆ ಉದ್ಭವವಾಗುತ್ತದೆ? ಅವುಗಳನ್ನು ಕೂಡ ನಾವು ನೋಡಬೇಕಾಗುತ್ತದೆ.

ಶ್ರೀ ಜೆ.ಹೆಚ್.ಪಟೇಲ್ : ತಕ್ಷಣ ನಾನು ಹೇಳಿದ್ದೇ ಸರಿ ಇದೆ ಎಂದಲ್ಲ, ಚರ್ಚೆ ಬೇಕು. ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ತಯಾರಿದ್ದೇವೆ. ಆದರೆ ಇದು ಕಡಿಮೆ ಸಮಯದಲ್ಲಿ ಮಾಡುವ ಚರ್ಚೆಯಲ್ಲ. ಕಡಿಮೆ ಸಮಯದಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಅದನ್ನು ಒಪ್ಪುತ್ತೇನೆ.

ಶ್ರೀ ಬಿ.ಸೋಮಶೇಖರ್ : 10-15 ನಿಮಿಷದಲ್ಲಿ ಇದು ಕಿಕ್ಕೂ ಬರುವುದಿಲ್ಲ. ಆದ್ದರಿಂದ ಸ್ವಲ್ಪ ನಿಧಾನವಾಗಿ ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು : ನಿಮಗೆ ಆ ಐಡಿಯಾ ಇಲ್ಲ ಎಂದುಕೊಂಡಿದ್ದೆ. ಈ ವಿಚಾರ ನಿಮಗೂ ಗೊತ್ತಿದೆ.

ಡಾ. ಎಂ.ಪಿ.ಕರ್ಕಿ : ನಮ್ಮ ಜಿಲ್ಲೆಯಲ್ಲಿ ಅತಿ ಹಿಂದುಳಿದಿರುವ ಹಾಲಕ್ಕಿ ಮಹಿಳೆಯರು ಈ ಪಾನನಿಷೇಧದ ಬಗ್ಗೆ ಚಳುವಳಿ ಮಾಡಿದ್ದಾರೆ. ನಾನು ಇದರ ಬಗ್ಗೆ ಪ್ರಶ್ನೆಯನ್ನು ಕೂಡ ಕೇಳಿದ್ದೆ. ಅದಕ್ಕೆ ಸರ್ಕಾರದಿಂದ ಉತ್ತರವಾಗಿ ಲೈಸನ್ಸ್ ಇಲ್ಲದೆ ಇರುವ ಅಂಗಡಿಗಳು ಎಂಟು-ಹತ್ತು ಎಂದು ಹೇಳಿದರು, ಕೆಲವು ಪ್ರಶ್ನೆಗಳಿಗೆ ''ಇಲ್ಲ'' ಎಂದು ಮತ್ತೆ ಕೆಲವಕ್ಕೆ ಉದ್ಭವವಾಗುವುದಿಲ್ಲ ಎಂದು ಉತ್ತರ ಸರ್ಕಾರದಿಂದ ಬಂತು.

ಗೂಡಂಗಡಿಗಳಲ್ಲೂ ಕೂಡ ಮಧ್ಯ ಮಾರಾಟ ಮಾಡುತ್ತಿದ್ದಾರೆ. ನಾನು ಬಂಕಿಕೋಡ್ ಎನ್ನುವ ಗ್ರಾಮದಲ್ಲಿ ಭಾಷಣ ಮಾಡಲು ಹೋದಾಗ ಒಬ್ಬ ಹುಡುಗ ಸೈಕಲ್ ಮೇಲೆ ಚೀಲದಲ್ಲಿ ಇಟ್ಟುಕೊಂಡು ಹೋಗಿ ತರಕಾರಿ ಮಾರಾಟ ಮಾಡುವ ರೀತಿಯಲ್ಲಿ ಮಾರಾಟ ಮಾಡುತ್ತಿದ್ದ. ಇದನ್ನು ಸರ್ಕಾರದ ಗಮನಕ್ಕೂ ತಂದರೂ ಕೂಡ ಅಂಥದ್ದು ಯಾವುದೂ ಇಲ್ಲ. ಎನ್ನುತ್ತಾರೆ. ಸಿಬ್ಬಂದಿಯವರು ಇದನ್ನು ಕಂಡುಹಿಡಿಯುವುದಕ್ಕೆ ಅವರಿಗೆ ನ್ಯಾಯವಾಗಿ ವಾಹನ ಸೌಲಭ್ಯ ಇಲ್ಲ, ಇದೆಲ್ಲಾ ಸಮಸ್ಯೆ ಇದೆ.

ಅಧ್ಯಕ್ಷರು: ಎಲ್ಲವನ್ನೂ ಚರ್ಚೆ ಮಾಡಬಹುದು. ಈ ನಿರ್ಣಯ ಸದನದ ವಸ್ತುವಾಗಿದೆ. ಚರ್ಚೆ ಹಂತದಲ್ಲಿ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಬಹುದು. ಅದಕ್ಕೆ ಅವಕಾಶ ಇರುತ್ತದೆ. ಅದಕ್ಕೆ ಮಾನ್ಯ ಉಪಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ ನಾನಾ ಮುಖಗಳಿದ್ದಾವೆಂದು. ಚರ್ಚೆ ಮಾಡಬಹುದು. ಅದಕ್ಕೆ ಅಭ್ಯಂತರವೇನೂ ಇಲ್ಲ. ಇದನ್ನು ಹಂತ ಹಂತವಾಗಿ ಮಾಡಬೇಕು. ಆಲ್ಕೋಹಾಲ್ ಇದೆಯಲ್ಲಾ, ಒಂದೇ ಸಲ ಮಾಡಬಾರದು ಸ್ಟೇಜ್ ಬೈ ಸ್ಟೇಜ್ ತಾನೇ ಇದು ?

ಡಾ.ಎಂ.ಪಿ. ಕರ್ಕಿ: ಸ್ಟೇಜ್ ಬೈ ಸ್ಟೇಜ್ ನಾನು ಹೇಳುವುದು ಲೈಸನ್ಸ್ ಷಾಪ್ ಇರಲಿ, ಸೆಕೆಂಡ್ ಸ್ಟೇಜ್‌ನಲ್ಲಿ ಲೈಸನ್ಸ್ ಕಮ್ಮಿ ಮಾಡುವಂಥ ಹಂತಕ್ಕೆ ಬರಬಹುದು. ಆದರೆ ಅನ್ ಲೈಸೆನ್ಸ್ಡ್ ಷಾಪ್‌ಗಳು, ಗೂಡಂಗಡಿಗಳಲ್ಲಿ ಮಾರಾಟ ಮಾಡತಕ್ಕದ್ದು, ತರಕಾರಿ ಮಾರಾಟ ಮಾಡುವ ಚೀಲದಲ್ಲಿ ತೆಗೆದುಕೊಂಡು ಹೋಗಿ ಜನರಿಗೆ ಹಂಚತಕ್ಕಂಥದ್ದು ಇದು ನಿಲ್ಲಬೇಕು.

ಅಧ್ಯಕ್ಷರು : ಕೊಳ್ಳುವವನು ಇರುವಾಗ ಮಾರುವವನು ಇದ್ದೇ ಇರುತ್ತಾನೆ. ಒಳ್ಳೆ ಕಥೆಯಾಯಿತಲ್ಲಾ.

ಶ್ರೀ ಆಯ್ಯನೂರು ಮಂಜುನಾಥ್ : ಪಾನನಿರೋಧವನ್ನು ಪ್ರಾರಂಭ ಮಾಡುವುದಕ್ಕೆ ಮೊದಲೇ ಪರ್ಸೆಂಟೇಜ್ ಎಷ್ಟಿತ್ತು ಮತ್ತೆ ಅದನ್ನು ಚಾಲ್ತಿಗೆ ಕೊಟ್ಟಾಗ ಇಲ್ಲಿಯವರೆಗೆ ಏನು ಪರ್ಸೆಂಟೇಜ್ ಇದೆ ಎಂಬುದನ್ನು ನೋಡಿದಾಗ ನಮಗೆ ಅನ್ನಿಸುತ್ತದೆ, ಸುಲಭವಾಗಿ ಸಿಕ್ಕಿದಾಗ ಅದು ಹೆಚ್ಚುತ್ತಾ ಹೋಗುತ್ತದೆ. ಆದಷ್ಟು ಅದನ್ನು ಕಡಿಮೆ ಮಾಡಲು ಹೋಗಬೇಕು. ಹಿಂದೆ ಉಡುಪಿ ಬ್ರಾಹ್ಮಣರ ಹೋಟೆಲ್, ವೀರಶೈವರ ಹೋಟೆಲ್, ಹಿಂದೂ ಮಿಲಿಟ್ರಿ ಹೋಟೆಲ್ ಎಂದೆಲ್ಲಾ ಇತ್ತು. ಈಗ ಸರ್ಕಾರ ಏನಾದರೂ ಸ್ವಲ್ಪ ಲೈಸೆನ್ಸ್ ಫ್ರೀ ಮಾಡಿದರೆ ಪ್ರತಿಯೊಂದು ಬೀದಿಯಲ್ಲಿರುತ್ತದೆ ಒಂದೊಂದು ಅಂಗಡಿಗಳು. ಈಗ ಎಲ್ಲರೂ ಸಾಮಾನ್ಯವಾಗಿ ಜೂಜಾಡುತ್ತಾರೆ. ಸರ್ಕಾರ ಫ್ರೀ ಬಿಟ್ಟರೆ ಎಲ್ಲಾ ಕಡೆಯಲ್ಲಿಯೂ ಆಡುತ್ತಾರೆ. ಅಂಗಡಿಗಳ ಸಂಖ್ಯೆಯೇ ಜಾಸ್ತಿ ಇದ್ದರೆ ಒಳ್ಳೆಯದು. ಸರ್ಕಾರ ಹಂತ ಹಂತವಾಗಿ ಇದನ್ನೆಲ್ಲಾ ನೋಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ವಾಟಾಳ್ ಅವರೇ ಮಂಜುನಾಥ್ ಅವರು ಮಾತನಾಡಿದ್ದು ತಮಗೆ ಅರ್ಥ ಆಯಿತಾ? ಈ ವಿಚಾರವೇ ಹೀಗೆ ನಿಷೆ ಬಂದಾಗ ನಿಜ ಮಾತನಾಡುತ್ತಾರೆ,

ಶ್ರೀ ವಾಟಾಳ್ ನಾಗರಾಜ್ : ಅವರು ಪರಮಾತ್ಮನ ಬಗ್ಗೆ ಹೇಳಿದರು. ನನಗೆ ಕೆಲವರು ಬೇಗ ಮುಗಿಸಿ ಎಂದು ಎಚ್ಚರಿಕೆ ಕೊಡುತ್ತಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳಿದ ಹಾಗೆ ಇದಕ್ಕೆ ಸಾಕಷ್ಟು ಕಾಲಾವಕಾಶ ಕೊಡೋಣ.

ಶ್ರೀ ಅಯ್ಯನೂರು ಮಂಜುನಾಥ್ : ನಾನು ಹೇಳಿದ್ದು ಕುಡುಕನ ಬಗ್ಗೆ. ನುಡಿದ ಹಾಗೆ ನಡೆಯುವವನು ಅವನೊಬ್ಬನೇ ಈ ಸಮಾಜದಲ್ಲಿ ಒಬ್ಬ ಕುಡುಕ ಹೀಗೆ ತೊದಲು ಹೆಜ್ಜೆ ಹಾಕುತ್ತಾನೆ ಹಾಗೆ ಮಾಡುತ್ತಾನೆ. ಅಂತಹ ವ್ಯಕ್ತಿಯನ್ನು ಕಳಿದುಕೊಳ್ಳುವುದಕ್ಕೆ ಮುಂಚೆ ಎಲ್ಲಾ ರೀತಿಯ ಚರ್ಚೆ ಮಾಡಲು ಅವಕಾಶ ಆಗಲಿ.

ಅಧ್ಯಕ್ಷರು : ಇವರು ಸತ್ಯವಂತರ ಮಾತು ಆಡುತ್ತಿದ್ದಾರೆ. ನಿಷೇಧ ಮಾಡಿದಾಗ ಸಮಾಜಕ್ಕೆ ಅಪಾಯ ಆಗುತ್ತದೆ ಎಂದು ಹೇಳುತ್ತಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಕುಡಿಯುವವರೆಲ್ಲಾ ಸತ್ಯವಂತರು ಅಲ್ಲ. ಅದು ಒಪ್ಪತಕ್ಕದ್ದು ಅಲ್ಲ.

ಶ್ರೀ ಅಯ್ಯನೂರು ಮಂಜುನಾಥ್ : ಕುಡಿದವನು ಹೇಗೆ ತೊದಲುತ್ತಾನೆ ಹಾಗೆಯೇ ನಡೆಯುತ್ತಾನೆ. ಎರಡೂ ತರಹ ಇದೆ : ನೀವು ಪೂರ್ತಿ ಮಾತು ಕೇಳಿಸಿಕೊಳ್ಳುವುದಕ್ಕೆ ಮುಂಚೆಯೇ ಮಾತನಾಡಿದರೆ ಹೇಗೆ? ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದ ಹಾಗೆ ನಾನಾ ರೀತಿಯ ಮುಖಗಳು ಇದ್ದಾವೆ. ಬಡವರ ಜೀವನ ಅಲ್ಲಿರತಕ್ಕ ಪರಿಸ್ಥಿತಿ ಬಗ್ಗೆ ಸುದೀರ್ಘವಾಗಿ ಚರ್ಚೆ ಆಗಲಿ. ಬಹಳಷ್ಟು ಕಡೆ ಕೂಲಿಕಾರರ ಪರಿಸ್ಥಿತಿ ಕೂಡ ಅಧ್ಯಯನ ಆಗಲಿ. ಆ ಮೂಲಕ ಅಲ್ಲಿರತಕ್ಕ ಸಂಗತಿಗಳೂ ಕೂಡ ಬೆಳಕಿಗೆ ಬರುತ್ತವೆ. ಮಧ್ಯಪಾನಕ್ಕೆ ಮೊರೆ ಹೋಗಲಿಕ್ಕೆ ಇರತಕ್ಕಂಥ ಕಾನೂನು ಕೂಡ ಈ ಸದನದಲ್ಲಿ ಚರ್ಚೆ ಆಗಲಿ ಎಂದು ನನ್ನ ಉದ್ದೇಶ. ಆ ದೃಷ್ಟಿಯಿಂದ ಹೇಳಿದೆ. ಇದರ ಬಗ್ಗೆ ಯೋಚನೆ ಮಾಡಿ.

ಶ್ರೀ ಕೆ.ಎನ್.ನಾಗೇಗೌಡ : ಒಂದೇ ಒಂದು ವಿಚಾರ ಹೇಳುತ್ತೇನೆ. ನಮ್ಮಂಥ ದೇಶಕ್ಕೆ ನಮ್ಮಂಥ ವ್ಯವಸ್ಥೆಗೆ ನಮ್ಮಂತಹ ದೊಡ್ಡ ಪ್ರಜಾಪ್ರಭುತ್ವಕ್ಕೆ ಈ ನಿಷೇದ ಎನ್ನತಕ್ಕ ಪದನೇ ಪಾಪದ ಪದ. ಎಲ್ಲಿ ಕಂಟ್ರೋಲ್ ಎನ್ನುವಂತಹ ಪದ ಬರುತ್ತದೆ. ಆಗ ಏನಾಗುತ್ತದೆ? ಹನುಮಂತಯ್ಯನವರ ಕಾಲದಿಂದ ನಾವು ನೋಡಿಕೊಂಡು ಬಂದಿರತಕ್ಕದ್ದು. ನಮ್ಮ ತಂದೆಯವರು ಹಿಂದೆ ಭತ್ತ ಹಂಚತಕ್ಕ ಕೆಲಸ ಮಾಡುತ್ತಿದ್ದರು. ಆ ಕಂಟ್ರೋಲ್ ಎನ್ನುವ ಪದದಿಂದಲೇ ಅನಾಹುತಗಳು ಜಾಸ್ತಿ ನಿಷೇಧ ಎನ್ನತಕ್ಕದ್ದು ಇಂಗ್ಲೀಷ್ ಪದ. ಆ ನಿಷೇಧ ಮಾಡದೇನೇ ನಮ್ಮ ದೇಶ ಮಿಕ್ಸ್ಡ್ ಏಕಾನಮಿ ಇರತಕ್ಕ ದೇಶದಲ್ಲಿ ಅನೇಕ ಜಾತಿ ಇರತಕ್ಕ ದೇಶದಲ್ಲಿ, ಅನೇಕ ಧರ್ಮ ಇರತಕ್ಕ ದೇಶದಲ್ಲಿ ಬಡತನ ಇರತಕ್ಕ ದೇಶದಲ್ಲಿ, ಬೀಲೋ 50 ಪರ್ಸೆಂಟ್ ಎಜುಕೇಷನ್ ಇರತಕ್ಕ ದೇಶದಲ್ಲಿ ನಾವು ವಿಶಾಲವಾಗಿ ಆ ನಿಷೇಧ ಎನ್ನುವ ಪದ ತೆಗೆದು ಬೇರೆ ಪದ ಕೊಡಬೇಕು. ನೀವು ಕಂಟ್ರೋಲ್ ಮೌಡಿ ನಾನು ಬೇಡವೆಂದು ಹೇಳುವುದಿಲ್ಲ. ನಮ್ಮ ಜಯದೇವಣ್ಣನವರು ಚೆನ್ನಾಗೆ ಹೇಳಿದರು. ನಾವು ಸಪೋರ್ಟ್ ಮಾಡೋಣ ಈ ನಿಷೇಧಕ್ಕೆ ಆಂಧ್ರದಲ್ಲಿ ನಿಷೇಧ ಮಾಡಿದ್ದಾರೆ. ಏನಾಗಿದೆ ಈಗ? ಕಳ್ಳಭಟ್ಟಿಗಳು ಸಾರಾಯಿಗಳು ಎಷ್ಟು ಇವೆ? ಇದರಿಂದ ಜಾಸ್ತಿ ಅಪಘಾತ ವಿನಹ ಬೇರೇನೂ ಇಲ್ಲ. ನಾನು ಒಂದು ಉದಾಹರಣೆ ಹೇಳುತ್ತೇನೆ. ಅಕ್ಕಿ ವಿಚಾರ ಡಿಸ್ಟ್ರಿಕ್ ಮೂವ್‌ಮೆಂಟ್ ಅಕ್ಕಿಯ ಬಗ್ಗೆ ಕಂಟ್ರೋಲ್ ಮಾಡಿದ್ದರು. ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಅಂತರ್‌ಜಿಲ್ಲಾ ಅಕ್ಕಿ ನಿರ್ಭಂಧ ಮಾಡಿದೆವು. ಬೆಲೆ ಜಾಸ್ತಿ ಆಯಿತು. ಯಾವುದೇ ಪದಾರ್ಥವನ್ನು ನೀವು ತೆಗೆದುಕೊಳ್ಳಿ. ನಿಷೇಧ ಎನ್ನುವ ಪದ ಇಂಗ್ಲೀಷ್ ಪದ,

ಕಂಟ್ರೋಲ್ ಎನ್ನುವ ಪದ ಇಂಗ್ಲೀಷ್ ಪದ. ದಯವಿಟ್ಟು ಮಾನ್ಯ ವಾಟಾಳ್ ನಾಗರಾಜ್ ಅವರು ಕನ್ನಡ ಅಗ್ರಗಣ್ಯನಾಯಕರು ಆ ಪದ ವಾಪಸ್ ತೆಗೆದುಕೊಂಡರೆ ಒಳ್ಳೆಯದು.

ಶ್ರೀ ಚಂದ್ರಕಾಂತ ಜಿ ಬೆಲ್ಲದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯ ಮಂತ್ರಿಗಳು ಈ ವಿಷಯ ಕೂಲಂಕಷವಾಗಿ ಚರ್ಚೆ ಆಗಬೇಕು ಎಂದು ಹೇಳಿದ್ದಾರೆ. ನೀವು ಈ ಸದನದ ಎಲ್ಲಾ ಸದಸ್ಯರ ಅಭಿಪ್ರಾಯವನ್ನು ಪಡೆದಿದ್ದೀರಿ. ಕೂಲಂಕಶವಾಗಿ ಚರ್ಚೆ ಆಗುವುದು ಅಗತ್ಯ ಇದೆ. ನಾನಾ ಮುಖದಿಂದ ಸಮಾಜದ ಮೇಲೆ, ಉಳಿದೆಲ್ಲಾ ದೃಷ್ಟಿಯಿಂದ ಏನು ಪರಿಣಾಮ ಆಗುತ್ತಿದೆ, ನಮ್ಮಲ್ಲಿ ಯಾವ್ಯಾವ ಭಾವನೆಗಳು ಇವೆ. ಯಾವ್ಯಾವ ಪರಿಸ್ಥಿತಿಯಲ್ಲಿ ಜನ ಹಾನಿ ಅನುಭವಿಸುತ್ತಿದ್ದಾರೆ. ಎನ್ನುವುದನ್ನು ಚರ್ಚೆ ಮಾಡಬೇಕಾಗಿದೆ. ಆರ್ಥಿಕವಾಗಿ ಸರ್ಕಾರಕ್ಕೆ ಬರುವಂತಹ ಬೊಕ್ಕಸಕ್ಕೆ ಹಾನಿ ಆಗುವುದಿಲ್ಲ. ಇವತ್ತು ಅನೇಕ ದೃಷ್ಟಿಯಿಂದ ನಾವು ನಿಷೇಧ ಮಾಡುವುದರಿಂದ, ಕಳಪೆ ಶೆರೆ ಕುಡಿಯುವುದಕ್ಕೆ ಶುರು ಮಾಡುತ್ತಾರೆ ಎನ್ನುವುದೂ ಸಹ ತಪ್ಪಾಗುತ್ತದೆ. ಏಕೆಂದರೆ ನಮಲ್ಲಿ ನಿಯಂತ್ರಣ ಇಲ್ಲ. ನಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎನ್ನುವುದನ್ನು ನಾವೆಲ್ಲಾ ವಿಚಾರ ಮಾಡಬೇಕಾಗಿದೆ. ಈ ಕಳಪೆಯನ್ನೂ ಅವರೇ ವ್ಯವಸ್ಥೆ ಮಾಡುತ್ತಾರೆ, ಈ ಅನ್ ಅಥರೈಸ್ಡ್ ಸೇಲ್ ಮಾಡುವುದಕ್ಕೂ ಅವರೇ ವ್ಯವಸ್ಥೆ ಮಾಡುತ್ತಾರೆ. ಈ ಎಲ್ಲಾ ವ್ಯವಸ್ಥೆಯನ್ನು ನಾವು ಬಹಳ ಬೆಳೆಸಿದ್ದೇವೆ. ಕಂಟ್ರೋಲ್ ಮಾಡುವುದು ಅಗತ್ಯ ಇದೆ, ಇವತ್ತಿನ ದಿವಸ ಸಮಾಜದ ಬೆಳವಣಿಗೆಯ ದೃಷ್ಟಿಯಿಂದ ಕಂಟ್ರೋಲ್ ಮಾಡುವ ಅವಶ್ಯಕತೆ ಇದೆ. ಬೇರೆ ಆದಾಯ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಭಾರತದಂತಹ ದೇಶದಲ್ಲಿ ನಿಷೇಧ ಸರಿಯಿಲ್ಲ ಎಂದು ಮಾನ್ಯ ನಾಗೇಗೌಡರು ಹೇಳತಕ್ಕದ್ದು ಸರಿಯಲ್ಲ. ಈ ಮಧ್ಯಪಾನ ಎನ್ನತಕ್ಕದ್ದು ನಾವು ಚರಿತ್ರೆಯಲ್ಲಿ ನೋಡಿದಾಗ ಯೂರೋಪ್ ರಾಷ್ಟ್ರಗಳಲ್ಲಿ, ಅತ್ಯಂತ ಚಳಿ ಇರುವ ರಾಷ್ಟ್ರದಲ್ಲಿ ಅವಶ್ಯಕತೆ ಇದೆ. ಭಾರತ ದೇಶದಲ್ಲಿ ಅದು ಅನಿವಾರ್ಯ ಎನ್ನುವ ಪ್ರಶ್ನೆ ನಾನು ಒಪ್ಪುವುದಿಲ್ಲ. ಅದು ಸರಿಯಲ್ಲ ಭಾರತದಂತಹ ದೇಶಕ್ಕೆ ಅನಿವಾರ್ಯವಲ್ಲ. ಆದರೆ ನಮ್ಮ ದೇಶದಲ್ಲಿ ಹಲವಾರು ಧರ್ಮ ಇದೆ. ಧರ್ಮ ದೇಶದಲ್ಲಿ ಸುರಾಪಾನ ನಡೆಯುತ್ತಿತ್ತು. ಎನ್ನುವಂತಹ ಕಥೆ ನಾನು ಅದನ್ನು ನಂಬುತ್ತೇನೋ ಬಿಡುತ್ತೇನೋ ಅದು ಬೇರೆ ಪ್ರಶ್ನೆ ಆದರೆ ಆ ದೇವರುಗಳು ಕೂಡ ಇದ್ದಂಥ ಪ್ರದೇಶಗಳು ಕೂಡ ಯಾವುದು ಎಂಬುದನ್ನು ಗುರುತಿಸಿದ್ದೇವೋ ಇಲ್ಲವೋ ಗೊತ್ತಿಲ್ಲ. ಈಜಿಪ್ಟ್ ದೇಶ ಅಥವಾ ನಮ್ಮ ಭಾರತದೇಶದ ಹಿಮಾಚಲ ಪರ್ವತದ ಸುತ್ತಲೂ ಇರಬಹುದು. ಆದರೆ ಅದು ಅನಿವಾರ್ಯ ಆಗತಕ್ಕ ದೃಷ್ಟಿ, ಅಲ್ಲ. ಅವಶ್ಯಕ ಎನ್ನತಕ್ಕ ದೃಷ್ಟಿಯಿಂದ ಚರ್ಚೆ ಮಾಡಬಹುದು ಆದರೆ ಅದು ಅನಿವಾರ್ಯ ಪ್ರಶ್ನೆ ಅಲ್ಲ ಎಂದು ಹೇಳುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಚುನಾವಣೆಯಲ್ಲಿ ಗೆದ್ದ ಮೇಲೆ ನಾನು ಭಾಷಣ ಮಾಡುತ್ತಿದ್ದೆ. ನಾನು ಭಾಷಣ ಮಾಡುತ್ತಿದ್ದಾಗ ಒಬ್ಬ ಎಣ್ಣೆ ಹಾಕಿದ್ದ, ನಮ್ಮ ಹಳ್ಳಿ ಭಾಷೆಯಲ್ಲಿ ಹೇಳುವುದಾದರೆ. ನೀವು ಒಬ್ಬ ಮಧ್ಯಪಾನದ ಬಗ್ಗೆ ಏನು ಮಾಡುವುದಕ್ಕೆ ಸಾಧ್ಯ ಇದೆ. ನಮ್ಮ ಕಡೆ ಬಹಳ ಜನ ಇಲ್ಲಿ ಇದ್ದಾರೆ, ಏನು ಮಾಡಿದರೂ ಅದನ್ನು ನಿಲ್ಲಿಸುವುದಕ್ಕೆ ಅವರು ಬಿಡುವುದಿಲ್ಲ ಎಂದು ಹೇಳಿದ. ಅವರ ಪಾರ್ಟಿಯಿಂದ ಅದನ್ನು

ಜಾರಿಗೆ ತಂದೇ ತರುತ್ತೇವೆ. ನೀನು ರೈತರ ಸಂಘದವನು ಇರುವುದು ಒಬ್ಬನೇ ಏನು ಮಾಡುವುದಕ್ಕೆ ಸಾಧ್ಯ ಎಂದು ಅವನು ಹೇಳಿದ ನಾನು ಏನು ಹೇಳುವುದು ಎಂದರೆ ನಾವು ಸದನದೊಳಗೆ ಎಷ್ಟು ಬೇಕಾದರೂ ಚರ್ಚೆ ಮಾಡೋಣ. ಇಡೀ ಕರ್ನಾಟಕದಲ್ಲಿ ಓದಿದ ಜನರು ಮಹಿಳೆಯರು, ಒಂದು ಕಡೆಯಿಂದ ಮಧ್ಯಪಾನ ಬೇಕೋ ಬೇಡವಾ ಎಂದು ಸಹಿ ಮಾಡಿಸಿ ಬಿಡಿ. ರಾಜ್ಯದಲ್ಲಿರತಕ್ಕ ಜನಾಭಿಪ್ರಾಯದ ಮೇಲೆ ನಾವು ತೀರ್ಮಾನ ಮಾಡುವುದು ಸುಲಭ. ಮೊನ್ನೆಯ ದಿವಸ ನಮ್ಮಲ್ಲಿ ಒಂದು ಇನ್ಸಿಡೆಂಟ್ ಆಯಿತು. ವಿ.ಸಿ. ನಾಲೆಗೆ ಅದು ಜನ ಬಿದ್ದರು. ಮೂರು ಜನ ಹೆಣ್ಣು ಮಕ್ಕಳು ಮೂರು ಜನ ಗಂಡು ಮಕ್ಕಳು. ಯಾವುದೋ ಒಂದು ಕಾರಣಕ್ಕೆ. ನಾವು ಎಷ್ಟು ದುಡಿದು ಬಂದರೂ ಒಬ್ಬನೇ ಒಬ್ಬ ಗಂಡಸು ಕುಡಿದು ಬಂದು ಹಾಳು ಮಾಡುತ್ತಾನೆ, ನಾವು ಇನ್ನೂ ಏಕೆ ಬದುಕಬೇಕು ಎಂದು ಹೇಳಿ ಆರು ಜನ ನಾಲೆಗೆ ಬಿದ್ದರು. ಇಬ್ಬರು ಎಸ್ಕೇಪ್ ಅದರು ನಾಲ್ಕು ಜನ ಸತ್ತರು. ಆದ್ದರಿಂದ ಇಡೀ ಜನತೆಯ ಅಭಿಪ್ರಾಯವನ್ನು ಕ್ರೋಢೀಕರಿಸಬೇಕು. ಪಾನ ನಿರೋಧದ ಬಗ್ಗೆ ಒಂದು ಅಂತಿಮ ತೀರ್ಮಾನಕ್ಕೆ ಬರಬೇಕು. ನನ್ನ ಅಭಿಪ್ರಾಯದಲ್ಲಿ ಇವತ್ತಿನ ದಿವಸ ಅದು ಯಾವುದೇ ಪಕ್ಷ ಆಗಬಹುದು, ರೈತ ಸಂಘ ಆಗಬಹುದು, ಕಾಂಗ್ರೆಸ್ ಆಗಬಹುದು ದಳ ಆಗಬಹುದು ಇಲ್ಲ ಬಿಜೆಪಿ ಆಗಬಹುದು. ಇವತ್ತು ಇಡೀ ಗ್ರಾಮೀಣ ಪ್ರದೇಶದಲ್ಲಿ ಏನು ಇಷ್ಟು ಹೆಂಡ ಸಾರಾಯಿ ಬೆಳವಣಿಗೆ ಆಗಿದ್ದು ಈ 15-20 ವರ್ಷದಿಂದ ಅದಕ್ಕೆ ಚುನಾವಣೆಯೇ ಮುಖ್ಯ ಕಾರಣ.

Sri Qumarul islam : For your information, Bangalore is having more pubs than Bombay.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಜನರ ಅಭಿಪ್ರಾಯವನ್ನು ಕ್ರೋಡೀಕರಿಸುವುದರಿಂದ ಬದಲಾವಣೆ ಆಗುವುದಕ್ಕೆ ಸಾಧ್ಯ ಎಂಬುದು ನನ್ನ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್ : ಈ ನಿಷೇಧ ಎನ್ನುವ ಪದ ತೆಗೆಯಬೇಕು ಒಳ್ಳೆಯದಲ್ಲ ಎಂದು ಮಾನ್ಯ ನಾಗೇಗೌಡರು ಹೇಳಿದರು. ದೆವ್ವದಪುರಾಣವನ್ನು ಕೇಳಿದ ಹಾಗೆ ಆಯಿತು. ಈ ತರಹ ಸಲಹೆ ಕೊಟ್ಟರೆ ಅದು ಒಳ್ಳೆಯ ಸಲಹೆ ಏನಲ್ಲ. ತಾವು ಕೇಳಿಸಿಕೊಳ್ಳಬೇಕು. ಇದು ದೆವ್ವದ ಹತ್ತಿರ ಭಗವದ್ಗೀತೆ ಕೇಳಿದ ಹಾಗೆ ಆಯಿತು. ನಾಗೇಗೌಡರು ನಿಷೇಧ ತೆಗೆಯಿರಿ ಎಂದು ಹೇಳಿದರು. ಆ ಪದ ತೆಗೆಯಿರಿ ಎಂದು ಹೇಳಿದರು. ಆದರೆ ನಮ್ಮಲ್ಲಿ ಒಂದು ಆತ್ಮಸ್ಥೈರ್ಯ ಬೇಕು.

ಶ್ರೀಮತಿ ಬಿ.ಟಿ.ಲಲಿತಾನಾಯಕ್ : ಭೂತದ ಕೈಯಲ್ಲಿ ಭಗವದ್ಗೀತೆ ಎಂದು.

ಶ್ರೀ ವಾಟಾಳ್ ನಾಗರಾಜ್ : ಅದು ನಿಮ್ಮ ಕವಿತೆ, ಇದು ನಮ್ಮ ಕವಿತೆ, ಇದನ್ನು ನಮ್ಮ ಮಾನ್ಯ ಪಾಟೇಲ್ ಅವರು ವ್ಯಖ್ಯಾಸ ಮಾಡಬೇಕು. ಅವರು ಹಿರಿಯರು. ಇವರು ಹೇಳಿದ ಪ್ರಕಾರ ವ್ಯಾಖ್ಯಾನ ಮಾಡಿಕೊಂಡು ಹೋದರೆ ಇನ್ನೂ 20-25 ವರ್ಷ ಕಳೆಯುತ್ತದೆ. ಇವರು ಹೇಳಿದ ಒಂದೊಂದು ಅಂಗವನ್ನು ವ್ಯಾಖ್ಯಾನ ಮಾಡಿಕೊಂಡು ಹೋದರೆ ಕಾಲ ಕಳೆಯುತ್ತದೆ. ನಮ್ಮಲ್ಲಿ ಒಂದು ಆತ್ಮಸ್ಥೈರ್ಯ ಬೇಕು. ಮಹಾತ್ಮಾ ಗಾಂಧಿಯವರ ನೀತಿಯ ಬಗ್ಗೆ ನೀವು ಒಪ್ಪುತ್ತೀರೋ ಇಲ್ಲವೋ?

7.50 ಪಿಎಂ

ಅವರ ತತ್ತ್ವವನ್ನು ನೀವು ಒಪ್ಪುತ್ತೀರೋ? ಇಲ್ಲವೋ? ಅವರು ಹೇಳಿರುವುದನ್ನು ಒಪ್ಪುವುದಿಲ್ಲವೆಂದರೆ ಹೇಗೆ ಅದರ ಅರ್ಥ?

ಶ್ರೀ ಜೆ.ಹೆಚ್.ಪಟೇಲ್ ಪ್ರಪಂಚದಲ್ಲಿ ಬಹಳ ಪ್ರಖ್ಯಾತರಾದ, ಶಕ್ತಿವಂತರಾದ ಇಬ್ಬರು ವ್ಯಕ್ತಿಗಳು ಒಂದೇ ಶತಮಾನದಲ್ಲಿ ಹುಟ್ಟಿದರು. ಒಬ್ಬರು ಮಹಾತ್ಮ ಗಾಂಧೀಜಿ ಇನ್ನೊಬ್ಬರು ಅಡಾಲ್ಫ್‌ಹಿಟ್ಲರ್. ಹಿಟ್ಲರ್ ಒಂದು ಹನಿಯಷ್ಟು ಅಲ್ಕೋಹಾಲ್ ತೆಗೆದುಕೊಳ್ಳದೆ ಜಗತ್ತಿನ ಬಹಳಷ್ಟು ಜನರನ್ನು ಕೊಲ್ಲಿಸುವಷ್ಟು ಕ್ರೂರಿಯಾದ ಎನ್ನುವುದನ್ನು ಯೋಚನೆ ಮಾಡಬೇಕು. ಮತ್ತು ಜಗತ್ತನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಿದ ಮಹಾತ್ಮ ಗಾಂಧೀಜಿಯವರು ಎಂದೂ ಆಲ್ಕೋಹಾಲ್ ತೆಗೆದುಕೊಂಡವರಲ್ಲ. ಆದುದರಿಂದ ಆಲ್ಕೋಹಾಲ್ ತೆಗೆದುಕೊಂಡರೆ, ಬಿಟ್ಟರೆ ಏನಾಗುತ್ತದೆಂದು....

ಶ್ರೀ ವಾಟಾಳ್ ನಾಗರಾಜ್ : ಇದು ವಿತ್ತಂಡ ವಾದ.

ಶ್ರೀ ಜೆ.ಎಚ್.ಪಾಟೀಲ್ : ಬರ್ಟ್ರಂಡ್ ರಸೆಲ್ ಬರೆದಿರುವ pleasures ಎಂಬ ಒಂದು ದೊಡ್ಡ ಪುಸ್ತಕವಿದೆ. ಅದರೊಳಗೆ alcoholism and liberalism in and pains human development ಎನ್ನುವ ಒಂದು ಪ್ಯಾರಾ ಇದೆ. ಇದರ ಬಗ್ಗೆ ಉದಾಹರಣೆ ಕೊಡುವುದಾದರೆ, ಒಬ್ಬ ಸ್ವಾಮೀಜಿ ತಮ್ಮ ಶಿಷ್ಯನೊಡಗೂಡಿ ಒಂದು ಹೊಳೆ ಧಾಟುವುದರಲ್ಲಿದ್ದರು. ಹೊಳೆಯಲ್ಲಿ ನೀರಿನ ಪ್ರವಾಹ ಜೋರಾಗಿತ್ತು. ಆಗ ಅಲ್ಲಿಗೆ ಒಬ್ಬ ಸುಂದರ ಮಹಿಳೆಯೊಬ್ಬಳು ಬಂದು ನನ್ನನ್ನೇನಾದರೂ ಮಾಡಿ ಆ ಕಡೆ ದಂಡೆಗೆ ದಾಟಿಸುತ್ತೀರಾ ಎಂದಳು. ಆಗ ಸ್ವಾಮೀಜಿ, ನಾನು ನಿನ್ನನ್ನು ಮುಟ್ಟುವುದಕ್ಕಾಗುವುದಿಲ್ಲವೆಂದರು. ಆಗ ಶಿಷ್ಯ ಆ ಮಹಿಳೆಯನ್ನು ತನ್ನ ಹೆಗಲ ಮೇಲೆ ಕೂರಿಸಿಕೊಂಡು ಮತ್ತೊಂದು ದಡಕ್ಕೆ ತಲುಪಿಸಿ ಆ ಮಹಿಳೆಯನ್ನು ಕಳುಹಿಸಿಕೊಟ್ಟು ಇವರಿಬ್ಬರೂ ಇತ್ತ ತಮ್ಮ ಮಾರ್ಗ ಹಿಡಿದು ಹೊರಟ ಸ್ವಲ್ಪ ಹೊತ್ತಾದ ಕೂಡಲೇ ಗುರು ಶಿಷ್ಯನನ್ನು ಉದ್ದೇಶಿಸಿ ನೀನು ಆ ಮಹಿಳೆಯನ್ನು ಮುಟ್ಟುಬಿಟ್ಟೆಯಲ್ಲಾ ಎಂದರು. ಶಿಷ್ಯ ಏನೂ ಮಾತನಾಡಲಿಲ್ಲ. ಇನ್ನು ಸ್ವಲ್ಪ ಸಮಯ ಕಳೆದ ನಂತರ ಮತ್ತೆ ಗುರು ಶಿಷ್ಯನನ್ನು ನೀನು ಆ ಮಹಿಳೆಯನ್ನು ಹೊತ್ತು ಕೊಂಡಿದ್ದಾಗ ನಿನಗೆ ಏನನ್ನಿಸಿತು? ಎಂದಾಗ ಶಿಷ್ಯ ಸ್ವಾಮಿ, ನಾನು ಆ ಮಹಿಳೆಯನ್ನು ನನ್ನ ಹೆಗಲ ಮೇಲೆ ಐದು ನಿಮಿಷಗಳ ಮಾತ್ರ ಹೊತ್ತುಕೊಂಡು ಇಳಿಸಿಬಿಟ್ಟೆ, ನಿಮ್ಮ ಮನಸ್ಸಿನಲ್ಲಿ ಇಲ್ಲಿಯವರೆಗೆ ಸುಮಾರು ಆರು ಗಂಟೆಗಳ ಕಾಲ ಆದರೂ ಇನ್ನೂ ಇಳೀಲೇ ಇಲ್ಲವಲ್ಲಾ. ಎಂದನು. ಹಾಗೆ ಕುಡಿದವರ ಅಮಲು ಸ್ವಲ್ಪ ಹೊತ್ತು ಇದ್ದು ಅನಂತರ ಇಳಿದುಹೋಗುತ್ತದೆ. ಆದರೆ ಕುಡಿಯದೇ ಇದ್ದವರ ಅಮಲು ಬೇಗ ಇಳಿಯುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಬರ್ಟ್ರಂಡ್ ರಸೆಲ್‌ರವರು ಇನ್ನೊಂದು ವಿಷಯವನ್ನು ಅವರ ಪುಸ್ತಕದಲ್ಲಿ ಹೇಳಿದ್ದಾರೆ ಏನೆಂದರೆ the intoxicated mind cannot think of the welfare of the human being. ಅದನ್ನು ಕೂಡ ತಾವು ಹೇಳಬೇಕು.

Mr. Speaker : Intoxication need not come only through liquor alone. There are several ways of geting intoxicated; it can come through lust of power...

Sri G.V. Srirama Reddy : Intoxication need not come from only one source. but, the intoxicated mind cannot think of human welfare at all. Bertrand Russel says that also.

ಅಧ್ಯಕ್ಷರು : ಇದು ಸ್ಪಷ್ಟತೆಯ ಪ್ರಶ್ನೆಯಾಗಿರುವುದರಿಂದ, ಒಬ್ಬ ಮನುಷ್ಯನ ಮೆದುಳಿಗೆ ಅಮಲು ಬರಬೇಕಾಗಿದ್ದರೆ ಅದು ಬರೀ ಮದ್ಯದಿಂದ ಬರಬೇಕೆಂದೇನೂ ಅಲ್ಲ. ಜಾತಿಯಿಂದ ಬರಬಹುದು, ಧರ್ಮದಿಂದ ಬರಬಹುದು, ಮತ ಭಾವನೆಯಿಂದ ಬರಬಹುದು, ಮದದಿಂದ ಬರಬಹುದು ಅಧಿಕಾರ ಲಾಲಸೆಯಿಂದ ಬರಬಹುದು, ಹೆಣ್ಣಿನ ವ್ಯಾಮೋಹದಿಂದ ಬರಬಹುದು. ಇನ್ನೂ ಅನೇಕ ಕಾರಣಗಳಿಂದ ಬರಬಹುದು. ಮನುಷ್ಯನ ಮನಸ್ಸು ವಿಕೃತಗೊಳ್ಳುವುದಕ್ಕೆ, ಹತೋಟಿ ತಪ್ಪುವುದಕ್ಕೆ ಅಮಲು ಏರಿದೆಯೆಂದರೇನು? ವ್ಯಕ್ತಿ ದೇಹದ ಸಮತೋಲನ ಕಳೆದುಕೊಳ್ಳುತ್ತಾನೆ. ಯಾವ ಕಾರಣದಿಂದಲೂ ಅದು ಆಗಬಹುದು. ಅದು ಬರೀ ಕುಡಿತದಿಂದಲೇ ಆಗಬೇಕೆಂದು ಏನೂ ಇಲ್ಲ.

Sri. J.H. Patel : To get intoxicated is not bad; intoxication can come from anything. But you should be intoxicated with new and fresh ideas.

sri. G.V. Srirama Reddy : Intoxication means, not necessarily from liquor, I too agree with you sir. But the point is, which intoxication is more dangerous to the human brain that is more important. The power intoxicated man will do less harm than the one intoxicated by liquor. ಅಧಿಕಾರ ಮದದಿಂದಿರುವ ಮನುಷ್ಯನಿಂದಾಗುವ ಅಪಾಯವೆಷ್ಟು? ಜಾತಿ ಭಾವನೆಯ ಮದದಿಂದಿರುವ ಮನುಷ್ಯನಿಂದಾಗುವ ಅಪಾಯವೆಷ್ಟು? ಮದ್ಯ ಸೇವನೆಯಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ನಾವು ವೈಜ್ಞಾನಿಕವಾಗಿ ಯೋಚಿಸುವುದಾದರೆ ಮದ್ಯ ಸೇವನೆ ಮಾಡಿದ ವ್ಯಕ್ತಿಯ ಮಿದುಳಿನ ಮೇಲೆ ಪರಿಣಾಮವುಂಟಾಗಿ ಅದರಿಂದ ಆತ ತನ್ನ ಆಲೋಚನಾ ಶಕ್ತಿ ಕಳೆದುಕೊಳ್ಳುತ್ತಾನೆ.

ಶ್ರೀ. ವಾಟಾಳ್ ನಾಗರಾಜ್ : ಇದರ ಬಗ್ಗೆ ಇನ್ನು ಹೆಚ್ಚು ಹೊತ್ತು ಮುಂದುವರೆಸಿದರೆ ಇವರೆಲ್ಲರೂ ನನ್ನ ಮೇಲೆ ಧಾಳಿ ನಡೆಸಲು ತಯಾರಿದ್ದಾರೆ. ಏಕೆಂದರೆ ಸಮಯವಾಗಿದೆ ಎಂದು ಹೇಳುತ್ತಿದ್ದಾರೆ. ಸಮಯವಾಯಿತೆಂದರೆ, ತಮಗೆ ಗೊತ್ತಿಲ್ಲ, ಇದರ ಬಗ್ಗೆ ಪ್ರೀತಿ ಪ್ರೇಮ ಇಟ್ಟುಕೊಂಡಿರುವವರಲ್ಲ. ಜೆ.ಹೆಚ್.ಪಟೇಲರು ಈಗ ಸ್ವಾಮೀಜಿಯವರ ಕಥೆಯನ್ನು ಬಹಳ ಚೆನ್ನಾಗಿ ಹೇಳಿದರು. ಆದರೆ, ಪಟೇಲರಿಗೆ ಗೊತ್ತಿರುವಂತೆ ನನಗೆ ಅವರ ಬಗ್ಗೆ ಬಹಳ ಗೌರವ, ಸ್ನೇಹ, ವಿಶ್ವಾಸ ಎಲ್ಲವೂ ಇದೆ. ಅಂತಹ ಸ್ವಾಮಿಗಳು ಯಾರೆಂದು ನನಗೆ ಗೊತ್ತಾಗಲಿಲ್ಲ. ಸ್ವಾಮಿಗಳು ಎಂದರೆ ಅದು ಅತ್ಯಂತ ಅಪಾಯಕಾರಿಯಾದಂಥ ಮಾತು. ನಾವು ಸ್ವಾಮಿಗಳ ತರಹ ಇಲ್ಲ.

ಅಧ್ಯಕ್ಷರು : ಅವರು ಶಿಷ್ಯರೆದು ಒಪ್ಪಿಕೊಳ್ಳಲು ತಯಾರಿರುವಾಗ ನೀವು ಆ ಸ್ವಾಮಿಗಳೆಂದು ಒಪ್ಪಿಕೊಳ್ಳಲು ಏನು ಲುಕ್ಸಾನು? ಅವರ ಶಿಷ್ಯರಾಗುವುದಕ್ಕೆ ತಯಾರಾಗಿದಿದ್ದರೆ ಅವರು ಹೇಳದಿರುವುದನ್ನೆಲ್ಲಾ ನೀವೇಕೆ ಕಲ್ಪಿಸಿಕೊಳ್ಳುತ್ತೀದ್ದೀರಿ?

ಶ್ರೀ ವಾಟಾಳ್ ನಾಗರಾಜ್ : ಅವರು ಬೇರೆ ಯಾರೋ ಸ್ವಾಮಿಗಳ ವಿಚಾರ ಹೇಳುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಜೆ.ಹೆಚ್.ಪಟೇಲ್ : ಮಾನ್ಯ ಸದಸ್ಯರ ಮನಸ್ಸಿಗೆ ಗೊತ್ತಿದೆ. ಯಾವ ಸ್ವಾಮಿಗಳು ಅವರ ಮನಸ್ಸಿನಲ್ಲಿದ್ದಾರೋ, ನನ್ನ ಮನಸ್ಸಿನಲ್ಲೂ ಅದೇ ಸ್ವಾಮಿಗಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಸತ್ಯಕ್ಕೆ ದೂರವಾದುದು. ನಾವು ಅವರು 10-6 ವರ್ಷಗಳಿಂದ ಜೊತೆಯಲ್ಲಿದ್ದೇವೆ.

ಅಧ್ಯಕ್ಷರು : ಒಂದು ವಿಷಯ ನಿಮ್ಮಿಬ್ಬರಿಗೂ ಗೊತ್ತಿದ್ದು, ಅದನ್ನು ಬಚ್ಚಿಟ್ಟು ಮಾತನಾಡಿದಾಗ ಹಕ್ಕುಚ್ಯುತಿಗೆ ಬರುತ್ತದೆ. ಮತ್ತು ಬೇರೆ ಸದಸ್ಯರೂ ಸಹ ನಮಗೂ ಆ ಮಾಹಿತಿ ಬೇಕೆಂದು ಕೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಒಂದುವೇಳೆ ಅದನ್ನು ಹಕ್ಕುಚ್ಯುತಿ ನಿರ್ಣಯವಾಗಿ ಮಂಡಿಸಿದರೆ ಅದಕ್ಕೆ ಉತ್ತರ ಕೊಡುವವರು ಪಟೇಲರೇ ವಿನಾ ನಾವಲ್ಲ. ಈಗ ಸಮಯವಾಗಿರುವುದರಿಂದ ನನ್ನ ನಿರ್ಣಯದಿಂದ ಬಹಳ ಜನರಿಗೆ ತೊಂದರೆ ಕೊಡಲು ನಾನು ತಯಾರಿಲ್ಲ. ಏಕೆಂದರೆ, ಬಹಳ ಜನರು ಕಾದಿದ್ದಾರೆ.

ಶ್ರೀ ಜಿ.ಬಿ. ಶಿವಕುಮಾರ್ : ಅಧ್ಯಕ್ಷರೆ, ಚರ್ಚೆಯ ಪ್ರಾರಂಭದಲ್ಲೇ ಯೋಚನೆ ಮಾಡಿಕೊಂಡು ಈಗಲೇ ವಿಷಯಗಳು ಹೊರಗೆ ಬರುತ್ತಿರುವಾಗ ಇನ್ನು ಚರ್ಚೆ ಮುಂದುವರೆಸಿದರೆ ಬಹಳ ಜನರ ಸಂಗತಿಗಳು ಹೊರಗೆ ಬರುತ್ತದೆ. ತಾವು ಬೇಗ ಮುಗಿಸಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಮಾತನಾಡಲು ಹದಿನೈದು ನಿಮಿಷಗಳನ್ನು ಮಾತ್ರ ಕೊಡಲಾಗಿತ್ತು, ಈಗ 35 ನಿಮಿಷಗಳಾಯಿತು. ಅವರು ಇನ್ನೂ ಅಮಲಿನಲ್ಲಿಯೇ ಇದ್ದಾರೆ. ಚರ್ಚೆಯನ್ನು ನಾಳೆ ಮುಂದುವರೆಸಿ.

ಅಧ್ಯಕ್ಷರು : ಚರ್ಚೆಯನ್ನು ನಾಳೆಗೆ ಮುಂದುವರೆಸೋಣವೇ?

ಶ್ರೀ ವಾಟಾಳ್ ನಾಗರಾಜ್ : ನನಗೆ ಚರ್ಚೆ ಮಾಡಲು ಸ್ಫೂರ್ತಿ ಬರಲೇ ಇಲ್ಲ. ಇವರು ಇಷ್ಟೊಂದು ಜನರು ಕೂಗಾಡಿದರೆ ಎಲ್ಲಿಂದ ಸ್ಫೂರ್ತಿ ಬರಲು ಸಾಧ್ಯ?

ಅಧ್ಯಕ್ಷರು : ಈಗ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು 1995ರ ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿಧೇಯಕವನ್ನು ಪರ್ಯಾಲೋಚಿಸಲು ಸಭೆ ಮುಂದೆ ಮಂಡಿಸುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸದರಿ ವಿಧೇಯಕದ ಬಗ್ಗೆ ಸ್ವಲ್ಪ ಚರ್ಚೆಯಾಗಬೇಕು. ಅದು ನಮ್ಮ ನಿರ್ಣಯಕ್ಕೆ ಬಿಟ್ಟ ವಿಚಾರ ತಮ್ಮಲ್ಲಿ ನನ್ನ ಮತ್ತೊಂದು ವಿನಂತಿಯೇನೆಂದರೆ ನಿನ್ನೆ ದಿವಸ ನಡೆಯಬೇಕಾಗಿದ್ದ ಕಾರ್ಯಕಲಾಪಗಳು ನಡೆಯದೆ ಮುಂದಕ್ಕೆ ಹೋಯಿತು. ತಮಗೆ ಗೊತ್ತಿರುವಂತೆ ಈ ಅಧಿವೇಶನ ಹತ್ತನೇ ತಾರೀಖಿನವರೆಗೆ ನಡೆಯುವುದೆಂದು ತೀರ್ಮಾನ ಮಾಡಿದ್ದೀರಿ. ನಿನ್ನೆ ನಡೆಯಬೇಕಾದ ಕಾರ್ಯಕಲಾಪ ನಡೆಯದಿದ್ದುದರಿಂದ ಅಧಿವೇಶನದ ಅವಧಿಯನ್ನು ಇನ್ನು ಒಂದು ದಿವಸ ಹೆಚ್ಚಿಗೆ ಮುಂದುವರೆಸಬೇಕಾಗುತ್ತದೆ. ತಾವು ದಯಮಾಡಿ ಆ ತೀರ್ಮಾನಕ್ಕೆ ಬರಬೇಕು. ನಿನ್ನೆಯ ಕಾರ್ಯಕಲಾಪದಲ್ಲಿ ಅನೇಕ ಸದಸ್ಯರು ಭಾಗವಹಿಸಬೇಕಾಗಿತ್ತು, ಕಲಾಪ ನಡೆಯದಿದ್ದರಿಂದ ನಾಳೆ ದಿವಸ ನಡೆಯುವ ಕಲಾಪದ ಚರ್ಚೆಯಲ್ಲಿ ಅವರುಗಳು ಭಾಗವಹಿಸಬೇಕಾಗಿದೆ. ಇದು ತಮಗೆ ತಿಳಿದಿರುವ ವಿಚಾರವೇ ಆಗಿದೆ.